24) ವಿಶೇಷ ಘಟಕ ಯೋಜನೆ					
ಅ) ಕೃಷಿ ಸಾಮಗ್ರಿ (ಶೇ. 100 ರಿ)	20	40000	-	-	20
ಆ) ನೀರಾವರಿ ಪಂಪುಸೆಟ್ಟು (ಶೇ. 60 ರಿ)	25	225000	-	-	25
ಇ) ಜಲಂತರ್ಗತ ಪಂಪ್ ಸೆಟ್ (ಶೇ. 60 ರಿ)	2	28900	-	-	2
ಈ) ಕೊಳವೆ ಭಾವಿ (ಶೇ. 60 ರಿ)	2	25800	-	-	2
25) ಗಿರಿಜನ ಉಪ-ಯೋಜನೆ :-					
ಅ) ಕೃಷಿ ಸಾಮಗ್ರಿ (ಶೇ. 100 ರಿ)	24	19200	-	-	24
ಆ) ನೀರಾವರಿ ಪಂಪ್ ಸೆಟ್ಟು (ಶೇ. 60 ರಿ)	3	27000	-	-	3
ಇ) ಸಸ್ಯ ಸಂರಕ್ಷಣಾ ಉಪಕರಣ (ಶೇ. 100 ರಿ)	8	8000	-	-	8
ಈ) ಕೃಷಿ ಉಪಕರಣ (ಶೇ. 100 ರಿ)	10	10000	-	-	10
26) ಭೂ ಸಾರ ಸಂರಕ್ಷಣೆ					
ಅ) ವಿಶೇಷ ಘಟಕ ಯೋಜನೆ	2	50000	-	-	2
ಆ) ಜವಹಾರ್ ರೋಜ್‌ಗಾರ್ ಯೋಜನೆ (ಶೇ. 20)	12	60000	-	-	12
ಇ) -ಡಿಟೋ- (ಶೇ. 22.5)	12	584000	-	-	12
ಈ) ಉದ್ಯೋಗ ಭರವಸೆ ಯೋಜನೆ	20	100000	-	-	20
ಉ) ರಿ-ರಿಯಾಯಿತಿ					

ವಿಷಯ :- ವಿರಾಜಪೇಟೆ ಹಾಗೂ ಗೋಣಿ ಕೊಪ್ಪದಲ್ಲಿ ವಾಹನಗಳ ಒತ್ತಡ ಕುರಿತು :

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2277 (3011)

ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿರಾಜಪೇಟೆ ಹಾಗೂ ಗೋಣಿ ಕೊಪ್ಪದಲ್ಲಿ ವಾಹನ ದಟ್ಟಣೆ ಅಧಿಕ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ವಿರಾಜಪೇಟೆ ಮತ್ತು ಗೋಣಿಕೊಪ್ಪದಲ್ಲಿನ ವಾಹನ ಒತ್ತಡ ಕಡಿಮೆ ಮಾಡಲು ಸರ್ಕಾರ ಯೋಚಿಸುತ್ತಿದೆಯೇ?

ಇ) ಹಾಗಿದ್ದಲ್ಲಿ ಯಾವ ಸಾಲಿನಲ್ಲಿ ಈ ಕಾಮಗಾರಿಯನ್ನು ಸರ್ಕಾರ ಕೈಗೆತ್ತಿಕೊಳ್ಳಲಿದೆ.

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು) :-

ಅ) ಹೌದು

ಆ) ವಾಹನ ಒತ್ತಡವನ್ನು ಕಡಿಮೆ ಮಾಡಲು ವಿರಾಜಪೇಟೆಯಲ್ಲಿ ಏಕ ಮುಖ

ಸಂಚಾರ ವ್ಯವಸ್ಥೆಯನ್ನು ಈಗಾಗಲೇ ಜಾರಿ ಮಾಡಲಾಗಿದೆ. ಹಾಗೂ ಗೋಣಿಕೊಪ್ಪದಲ್ಲಿ ರಸ್ತೆಯನ್ನು ಅಗಲ ಮಾಡಲು ಕ್ರಮ ತೆಗೆದುಕೊಳ್ಳುವುದರೊಂದಿಗೆ ಏಕ ಮುಖ ಸಂಚಾರ ವ್ಯವಸ್ಥೆಗೆ ಸೂಕ್ತ ವಿರ್ಪಾಡು ಮಾಡಲಾಗಿದೆ.

ಇ) ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ವಿಷಯ :- ವಿರಾಜಪೇಟೆ ವಿಭಾಗದಲ್ಲಿ ಸುವಿಹಾರಿ ಬಸ್ಸುಗಳನ್ನು ಓಡಿಸಲು ಮನವಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2278 (3021)

ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿರಾಜಪೇಟೆ ವಿಭಾಗದಲ್ಲಿ ಸಂಚರಿಸುವ ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ವೇಳಾ ಪಟ್ಟಿಯ ಪ್ರಕಾರ ಸಂಚರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಆದಾಯ ಹೆಚ್ಚು ತರುವ ಈ ವಿಭಾಗದಲ್ಲಿ ಬೆಂಗಳೂರಿನಿಂದ ವೀರಾಜಪೇಟೆಗೆ ಮತ್ತು ವೀರಾಜಪೇಟೆಯಿಂದ ಬೆಂಗಳೂರಿಗೆ ಪ್ರತಿ ರಾತ್ರಿ ಸುವಿಹಾರಿ ಬಸ್ಸನ್ನು ಓಡಿಸುವ ಬಗ್ಗೆ ಸಾರ್ವಜನಿಕರ ಅಪೇಕ್ಷೆಯನ್ನು ಪರಿಗಣಿಸಿ ಎಂದಿನಿಂದ ಮೇಲಿನ ವಿರ್ಪಾಡು ಮಾಡಲಾಗುವುದು?

ಶ್ರೀ ಕೆ. ಎಸ್. ಬೀಳಿಗಿ (ಸಾರಿಗೆ ಮಂತ್ರಿಗಳು) :-

ಅ) ಅನಿವಾರ್ಯ ಕಾರಣಗಳಿಂದ ಕೆಲವು ಬಸ್ಸುಗಳನ್ನು ತಡವಾಗಿ ಕಾರ್ಯಾಚರಣೆ ಮಾಡಲಾಗಿದೆ.

ಆ) ವೇಳಾಪಟ್ಟಿಗೆ ಅನುಗುಣವಾಗಿ ಬಸ್ಸುಗಳನ್ನು ಕಾರ್ಯಾಚರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಪ್ರಸ್ತುತ ಮುಂಗಾರು ಮುಗಿದ ನಂತರ ಈ ವಿಷಯವನ್ನು ಪರಿಶೀಲಿಸಲಾಗುವುದು.

ವಿಷಯ :- ಕ. ರಾ. ರ. ಸಾರಿಗೆ ಸಂಸ್ಥೆಯಲ್ಲಿನ ನೇಮಕಾತಿ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2279 (2952)

ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸಿಬ್ಬಂದಿ ಮೇಲ್ವಿಚಾರಕರು,